ಗಮನಕ್ಕೆ ಬಂದಿದೆಯೇ?

ಈ) ಇದಕ್ಕೆ ಇಲಾಖೆಯ ಅಧಿಕಾರಿಗಳು ಕಾರಣರೆ? ಹೇಗೆ? ಇಂತಹ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಕಂಡು ಬಂದಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ.

ಉ) ಇಂತಹ ಪ್ರಕರಣಗಳು ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುವುದಿಲ್ಲವೇ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಎ.ಡಿ.ಬಿ. ಯೋಜನೆ ಕುರಿತು.

266(251)

ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎ.ಡಿ.ಬಿ. ಯೋಜನೆಯಲ್ಲಿ ಕರಾವಳಿ ಜಿಲ್ಲೆಯ ಕಾರ್ಕಳ, ಮೂಡಬಿದ್ರೆ, ಬಂಟ್ವಾಳ, ಮೂಲ್ಕಿ ಪುರಸಭೆಗಳನ್ನು ಸೇರಿಸದಿರಲು ಕಾರಣವೇನು;

ಆ) ಈ ಪುರಸಭೆಗಳನ್ನು ಹೆಚ್ಚುವರಿಯಾಗಿ ಸೇರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೆ; (ವಿವರ ಒದಗಿಸುವುದು)

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಎ.ಡಿ.ಬಿ. ಯೋಜನೆಯಲ್ಲಿ ಈ ಕೆಳಕಂಡ ಅಂಶಗಳ ಆಧಾರದ ಮೇಲೆ

ವಿವರವಾದ ಅಧ್ಯಯನದ ನಂತರ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಸರ ನಿರ್ವಹಣಾ ಯೋಜನೆಯಡಿ ಪಟ್ಟಣಗಳನ್ನು ಆರಿಸಲಾಯಿತು.

1) ನಗರ : ಪಟ್ಟಣದ ಜನ ಸಂಖ್ಯೆ

2) ಈಗಿರುವ ಮೂಲ ಭೂತ ಸೌಲಭ್ಯಗಳು

3) ನಗರ ಸಭೆ : ಪುರಸಭೆಯಲ್ಲಿ ಅಭಿವೃದ್ಧಿ ನಕಾಶೆಯ ಲಭ್ಯತೆ.

4) ನಗರ ಸಭೆ : ಪುರಸಭೆಯ ಸಾಲವನ್ನು ಹಿಂತಿರುಗಿಸುವ ಬಗ್ಗೆ (ಆರ್ಥಿಕ ಸ್ಥಿತಿ)

ಮೇಲಿನ ಅಂಶಗಳ ಆಧಾರದ ಮೇಲೆ ಕೇವಲ 10 ಪಟ್ಟಣಗಳನ್ನು ಅಂತಿಮವಾಗಿ ತೆಗೆದುಕೊಳ್ಳಲಾಗಿದೆ.

ಆ) ಈ ಯೋಜನೆಯಡಿಯಲ್ಲಿ ಆರ್ಥಿಕ ಉಳಿತಾಯದ ಮೇರೆಗೆ, ಪುರಸಭೆಗಳನ್ನು ಹೆಚ್ಚುವರಿಯಾಗಿ ಸೇರಿಸುವ ವಿಚಾರವನ್ನು ಯೋಜನೆಯ 3ನೇ ವರ್ಷದ ಅನುಷ್ಠಾನದ ನಂತರವೇ ಪರಿಗಣಿಸಬಹುದು.

ರಾಜ್ಯದಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳ ಕುರಿತು.

267(252)

ಶ್ರೀ ಗೋಪಾಲ ಭಂಡಾರಿ ಹೆಚ್.(ಕಾರ್ಕಳ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು);

ಆ) ರೋಗಗ್ರಸ್ತ ಘಟಕಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು);

ಇ) ಇವುಗಳ ಪುನಶ್ಚೇತನಕ್ಕೆ ಏನು ಯೋಜನೆಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):